ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1976\2016\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:18/03/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀ.ಸಿದ್ದಲಿಂಗೇಗೌಡ ಬಿನ್ ಲೇ.ಬೋರೇಗೌಡ, ವಿಶ್ವ ಮಾನವ ಹಕ್ಕುಗಳ ಹೋರಾಟಗಾರ, ಮಾವಿನಕೆರೆ, ತುರುವೇಕೆರೆ ತಾಲ್ಲೂಕ್, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆ ತುರುವೇಕೆರೆ ತಾಲ್ಲೂಕ್ ಮಾವಿನಕೆರೆಯ ವಿಶ್ವ ಮಾನವ ಹಕ್ಕುಗಳ ಹೋರಾಟಗಾರ ಶ್ರೀ.ಸಿದ್ದಲಿಂಗೇಗೌಡ ಬಿನ್ ಲೇ.ಬೋರೇಗೌಡ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ 1) ತಹಶೀಲ್ದಾರ್‌ರಾದ ಶ್ರೀ.ಏಕೇಶ್ ಬಾಬು, 2) ವಲಯ ಅರಣ್ಯಾಧಿಕಾರಿಗಳಾದ ಶ್ರೀ.ಸಂತೋಷ್, 3) ಚನ್ನರಾಯನದುರ್ಗ ಹೋಬಳಿಯ ರಾಜಸ್ವ ನಿರೀಕ್ಷಕರಾದ ಶ್ರೀ.ರಾಜು, 4) ಸೂರೇನಹಳ್ಳಿ ವೃತ್ತದ ಗ್ರಾಮ ಲೆಕ್ಕಿಗರಾದ ಶ್ರೀಮತಿ.ಮೇಘನಾ ಮತ್ತು 5) ಆರಕ್ಷಕ ಉಪ ನಿರೀಕ್ಷಕರಾದ ಶ್ರೀ.ಮುತ್ತುರಾಜ್ (ಇನ್ನು ಮುಂದೆ "1 ರಿಂದ 5ನೇ ಎದುರುದಾರರು" ಎಂದು ಕ್ರಮವಾಗಿ, ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ಓಬನಹಳ್ಳಿ ಗ್ರಾಮದ ಸಾರ್ವಜನಿಕರು ಅನಧಿಕೃತವಾಗಿ ಸರ್ಕಾರಿ ಭೂಮಿಯನ್ನು ಪ್ರವೇಶಿಸಿ, ಮರಗಿಡಗಳನ್ನು ಕಡಿದು ಸ್ವಚ್ಛಗೊಳಿಸಿ, ಸ್ವಾಧೀನಾನುಭವವನ್ನು ಪ್ರಯತ್ನಿಸಿದ್ದು, ಎದುರುದಾರರು ಸದರಿ ಗ್ರಾಮಸ್ಥರ ವಿರುದ್ಧ ಕ್ರಮ ಕೈಗೊಳ್ಳದೇ ಹಾಗೂ ಸರ್ಕಾರದ ಜಮೀನನ್ನು ಸರ್ಕಾರಕ್ಕೆ ಉಳಿಸಿಕೊಳ್ಳಲು ವಿಫಲರಾಗಿ ಕರ್ತವ್ಯ ಲೋಪ ಎಸಗಿರುವುದಾಗಿ ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, 1, 3 ಮತ್ತು 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಓಬನಹಳ್ಳಿ ಗ್ರಾಮದ ಸರ್ವೆ ನಂ.22, 23, 24 ಸರ್ಕಾರಿ ಖರಾಬ್ ಜಮೀನಾಗಿದ್ದು, ಸರ್ವೆ ನಂ.22ರಲ್ಲಿ 22.74 ಹೆಕ್ಟೇರ್ ವಿಸ್ತೀರ್ಣವಿದ್ದು, ಅದರಲ್ಲಿ 9 ಜನರಿಗೆ ಪಹಣಿ ಇದೆ. ಬಗರ್ ಹುಕುಂ ಸಮಿತಿಗೆ ನಮೂನೆ–50, 53ರ 21 ಅರ್ಜಿಗಳನ್ನು ಮಂಡಿಸಿದ್ದು, ಅದರಲ್ಲಿ 9 ಅರ್ಜಿಗಳು ಮಂಜೂರಾಗಿವೆ. ಉಳಿಕೆ 12 ಅರ್ಜಿಗಳು ವಜಾಗೊಂಡಿವೆ. ಸರ್ವೆ ನಂ.23ರಲ್ಲಿ 59.20 ಎಕರೆ ವಿಸ್ತೀರ್ಣವಿದ್ದು, ಅದರಲ್ಲಿ 10 ಗುಂಟೆ ಸ್ಮಶಾಣಕ್ಕೆ ಮಂಜೂರಾಗಿದೆ. ಬಗರ್ ಹುಕುಂ ಸಮಿತಿಗೆ ನಮೂನೆ–50, 53ರ 18 ಅರ್ಜಿಗಳಿದ್ದು, ಅದರಲ್ಲಿ 13 ಅರ್ಜಿಗಳು ವಜಾಗಿವೆ. 5 ಅರ್ಜಿಗಳು 9.7 ಎಕರೆ ಮಂಜೂರಾಗಿದೆ. ಸರ್ವೆ ನಂ.24ರಲ್ಲಿ ಒಟ್ಟು 287.21 ಎಕರೆ ಗುಂಟೆ ವಿಸ್ತೀರ್ಣವಿದ್ದು, ಆ ಪೈಕಿ 49.24 ಎಕರೆ ಮಂಜೂರಾಗಿ, ಪಹಣಿ ಬಂದಿದೆ. ಈ ಬಗ್ಗೆ ನಮೂನೆ–50, 53ರಲ್ಲಿ ಒಟ್ಟು 101 ಅರ್ಜಿ ಸಲ್ಲಿಸಿದ್ದು, ಅದರಲ್ಲಿ 27 ಅರ್ಜಿಗಳು 61.1 ಎಕರೆ ಮಂಜೂರಾಗಿದ್ದು, ಉಳಿದ 74 ಅರ್ಜಿಗಳು ವಜಾಗೊಂಡಿವೆ. ಸರ್ವೆ ನಂ.22ರಲ್ಲಿ 22 ಹೆಕ್ಟೇರ್ ಡ್ರೀಮ್ ಫಾರೆಸ್ಟ್ ವ್ಯಾಪ್ತಿಗೊಳಪಟ್ಟಿದ್ದು, ಆ ಪ್ರದೇಶವನ್ನು ಉಳಿಸಿಕೊಳ್ಳಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಉಳಿದ 10 ಎಕರೆ ಜಮೀನನ್ನು ಪೋಲೀಸ್ ಪಬ್ಲಿಕ್ ಶಾಲೆಗೆ, ಪೋಲೀಸ್ ತರಭೇತಿ ಶಾಲೆಗೆ 60 ಎಕರೆ, ಮೊರಾರ್ಜಿ ವಸತಿ ಶಾಲೆಗೆ 10 ಎಕರೆ ಜಮೀನಿನ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಜಮೀನುಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭಗಳಲ್ಲಿ ಮರ–ಗಿಡಗಳನ್ನು ಕಿತ್ತು ಹಾಕಿ, ಸಮತಟ್ಟು ಮಾಡಿದ್ದು, ಈ ಬಗ್ಗೆ ಜೆಸಿಬಿ, ಟ್ರ್ಯಾಕ್ಟರ್‌ಗಳನ್ನು ಜಪ್ತು ಮಾಡಿ ಕರ್ನಾಟಕ ಭೂ ಕಂದಾಯ ಕಾಯಿದೆ, ಕಲಂ 192ರಂತೆ ಪ್ರಕರಣ ದಾಖಲಿಸಲಾಗಿದೆ ಹಾಗೂ ಸದರಿ ಜಮೀನಿನಲ್ಲಿ ಮರಗಿಡಗಳನ್ನು ನಾಶಪಡಿಸಿದ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆಯೆಂದು ಹೇಳಿದ್ದಾರೆ.

4. ಎರಡನೇ (2ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಜಮೀನಿನಲ್ಲಿ ಮರಗಿಡಗಳನ್ನು ಕಡಿದು ಸ್ವಚ್ಛಗೊಳಿಸಿದ ಬಗ್ಗೆ ಜೆಸಿಬಿ, ಟ್ರ್ಯಾಕ್ಟರ್ ಹಾಗೂ ಕಾರುಗಳನ್ನು ಜಪ್ತು ಮಾಡಿದ್ದು, ಈ ಬಗ್ಗೆ 3ನೇ ಎದುರುದಾರರು ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ. ಈ ಬಗ್ಗೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯದಲ್ಲಿ ದಾಖಲಿಸಲಾಗಿದೆಯೆಂದು ಹೇಳಿದ್ದಾರೆ.

5. ಐದನೇ (5ನೇ) ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ–

ಸದರಿ ಸರ್ವೆ ನಂ.22, 23 ಮತ್ತು 24 ಜಮೀನುಗಳಿಗೆ ಸಂಬಂಧಪಟ್ಟಂತೆ ಕೆಲವು ವ್ಯಕ್ತಿಗಳು ಜೆಸಿಬಿ ಯಿಂದ ಮರಗಿಡಗಳನ್ನು ಕಿತ್ತು ಉಳುಮೆ ಮಾಡುತ್ತಿರುವುದಾಗಿ ದೂರು ನೀಡಿದ್ದು, ದಿ:27/07/16ರಂದು ಸ್ಥಳಕ್ಕೆ ಭೇಟಿ ಮಾಡಿದ್ದು, ಆ ಸಂದರ್ಭದಲ್ಲಿ ಯಾರೂ ಸಹ ಸ್ಥಳದಲ್ಲಿರಲಿಲ್ಲ. ಆದರೆ, ಸದರಿ ಒತ್ತುವರಿಗೆ ಸಂಬಂಧಿಸಿದಂತೆ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ ವಾಹನಗಳನ್ನು ಜಪ್ತು ಮಾಡಿ, ತಮ್ಮ ಠಾಣಾ ಮೊಕದ್ದಮೆ ಸಂ:173/2016 ಐಪಿಸಿ ಕಲಂ 447 ಸಹ ಕಲಂ 192 ಕೆಎಲ್‌ಆರ್ ಕಾಯಿದೆ ಅನ್ವಯ ಪ್ರಕರಣ ದಾಖಲಿಸಿ, ಆ ಸಂದರ್ಭದಲ್ಲಿ ಪಂಚಾಯತ್‌ದಾರರ ಸಮಕ್ಷಮ ತನಿಖೆ ನಡೆಸಲಾಗಿದೆ. ಪ್ರಸ್ತುತ ಪ್ರಕರಣ ತನಿಖಾ ಹಂತದಲ್ಲಿದೆಯೆಂದು ಹೇಳಿದ್ದಾರೆ.

6. ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಆಕ್ಷೇಪಣೆಯ ಅಂಶಗಳನ್ನು ಅಲ್ಲಗಳೆದು, ದೂರಿನ ಅಂಶಗಳನ್ನೇ ಪುನರುಚ್ಚರಿಸಿದ್ದಾರೆ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ –

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ಓಬನಹಳ್ಳಿ ಗ್ರಾಮದ ಸರ್ವೆ ನಂ.22, 23, 24 ಸರ್ಕಾರಿ ಖರಾಬ್ ಜಮೀನಾಗಿದ್ದು, ಸರ್ವೆ ನಂ.22ರಲ್ಲಿ 22.74 ಹೆಕ್ಟೇರ್ ವಿಸ್ತೀರ್ಣವಿದ್ದು, ಅದರಲ್ಲಿ 9 ಜನರಿಗೆ ಪಹಣಿ ಇದೆ. ಬಗರ್ ಹುಕುಂ ಸಮಿತಿಗೆ ನಮೂನೆ–50, 53ರ 21 ಅರ್ಜಿಗಳನ್ನು ಮಂಡಿಸಿದ್ದು, ಅದರಲ್ಲಿ 9 ಅರ್ಜಿಗಳು ಮಂಜೂರಾಗಿವೆ. ಉಳಿಕೆ 12 ಅರ್ಜಿಗಳು ವಜಾಗೊಂಡಿವೆ. ಸರ್ವೆ ನಂ.23ರಲ್ಲಿ 59.20 ಎಕರೆ ವಿಸ್ತೀರ್ಣವಿದ್ದು, ಅದರಲ್ಲಿ 10 ಗುಂಟೆ ಸ್ಮಶಾಣಕ್ಕೆ ಮಂಜೂರಾಗಿದೆ. ಬಗರ್ ಹುಕುಂ ಸಮಿತಿಗೆ ನಮೂನೆ–50, 53ರ 18 ಅರ್ಜಿಗಳಿದ್ದು, ಅದರಲ್ಲಿ 13 ಅರ್ಜಿಗಳು ವಜಾಗಿವೆ. 5 ಅರ್ಜಿಗಳು 9.7 ಎಕರೆ ಮಂಜೂರಾಗಿದೆ. ಸರ್ವೆ ನಂ.24ರಲ್ಲಿ ಒಟ್ಟು 287.21 ಎಕರೆ ಗುಂಟೆ ವಿಸ್ತೀರ್ಣವಿದ್ದು, ಆ ಪೈಕಿ 49.24 ಎಕರೆ ಮಂಜೂರಾಗಿ, ಪಹಣಿ ಬಂದಿದೆ. ಈ ಬಗ್ಗೆ ನಮೂನೆ–50, 53ರಲ್ಲಿ ಒಟ್ಟು 101 ಅರ್ಜಿ ಸಲ್ಲಿಸಿದ್ದು, ಅದರಲ್ಲಿ 27 ಅರ್ಜಿಗಳು 61.1 ಎಕರೆ ಮಂಜೂರಾಗಿದ್ದು, ಉಳಿದ 74 ಅರ್ಜಿಗಳು ವಜಾಗೊಂಡಿವೆ. ಸರ್ವೆ ನಂ.22ರಲ್ಲಿ 22 ಹೆಕ್ಟೇರ್ ಡ್ರೀಮ್ ಫಾರೆಸ್ಟ್ ವ್ಯಾಪ್ತಿಗೊಳಪಟ್ಟಿದ್ದು, ಆ ಪ್ರದೇಶವನ್ನು ಉಳಿಸಿಕೊಳ್ಳಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ಉಳಿದ 10 ಎಕರೆ ಜಮೀನನ್ನು ಪೊಲೀಸ್ ಪಬ್ಲಿಕ್ ಶಾಲೆಗೆ, ಪೊಲೀಸ್ ತರಭೇತಿ ಶಾಲೆಗೆ 60 ಎಕರೆ, ಮೊರಾರ್ಜಿ ~~ವಸತಿ ಶಾಲೆಗೆ~~ 10 ಎಕರೆ ಜಮೀನಿನ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸದರಿ ಜಮೀನುಗಳಲ್ಲಿ ಸ್ಥಳಕ್ಕೆ ಭೇಟಿ ನೀಡಿದ ಸಂದರ್ಭಗಳಲ್ಲಿ ಮರ–ಗಿಡಗಳನ್ನು ಕಿತ್ತು ಹಾಕಿ, ಸಮತಟ್ಟು ಮಾಡಿದ್ದು, ಈ ಬಗ್ಗೆ ಜೆಸಿಬಿ,

ಟ್ರ್ಯಾಕ್ಟರ್‌ಗಳನ್ನು ಜಪ್ತು ಮಾಡಿ ಕರ್ನಾಟಕ ಭೂ ಕಂದಾಯ ಕಾಯಿದೆ, ಕಲಂ 192ರಂತೆ ಪ್ರಕರಣ ದಾಖಲಿಸಲಾಗಿದೆ ಹಾಗೂ ಸದರಿ ಜಮೀನಿನಲ್ಲಿ ಮರಗಿಡಗಳನ್ನು ನಾಶಪಡಿಸಿದ ವ್ಯಕ್ತಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಈ ಬಗ್ಗೆ ಕೊರಟಗೆರೆ ಪೊಲೀಸ್ ಠಾಣೆ ಅಪರಾಧ ಸಂ:173/2016 ಐಪಿಸಿ ಕಲಂ 447 ಸಹ ಕಲಂ 192 ಕೆಎಲ್‌ಆರ್ ಕಾಯಿದೆ ಅನ್ವಯ ಪ್ರಕರಣ ದಾಖಲಾಗಿ ಸದರಿ ಪ್ರದೇಶದಲ್ಲಿ ಮರಗಿಡಗಳನ್ನು ಕಡಿದು ಸಮತಟ್ಟು ಮಾಡಿರುವ ಬಗ್ಗೆ ಬಳಸಲಾದ ಕಾರುಗಳು, ಜೆಸಿಬಿ, ಟ್ರ್ಯಾಕ್ಟರ್‌ಗಳನ್ನು ಜಪ್ತು ಮಾಡಿದ್ದು, ಪ್ರಸ್ತುತ ವಿಚಾರಣೆಯ ಹಂತದಲ್ಲಿದೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅಕ್ರಮ ಒತ್ತುವರಿದಾರರ ವಿರುದ್ಧ ಕೆಎಲ್‌ಆರ್ ಕಾಯಿದೆ ಅನ್ವಯ ಪ್ರಕರಣ ದಾಖಲಿಸಿರುವುದು ಕಂಡು ಬರುತ್ತದೆ.

8. ಆದ್ದರಿಂದ, ಸದರಿ ಸರ್ವೆ ನಂ.22, 23, 24 ಜಮೀನುಗಳಲ್ಲಿ ಅಕ್ರಮ ಒತ್ತುವರಿದಾರರನ್ನು ತೆರವುಗೊಳಿಸಿ, ಸರ್ಕಾರದ ಜಮೀನನ್ನು ಸರ್ಕಾರಕ್ಕೆ ಉಳಿಸುವ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

9. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

18/3/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**